# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 321/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ಪರಪನಗೌಡ ಗೋವಿಂದೇಗೌಡ ರೇಣುಕೇಗೌಡ | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ | ಶ್ರೀ ಗೋವಿಂದೇಗೌಡ | **04.03.2021** |
| ವಯಸ್ಸು | ಃ | 57 ವರ್ಷ | |
| ವೃತ್ತಿ | ಃ | ವ್ಯವಸಾಯ | ಪ್ರಾ.ಸಾ. ಃ 08 |
| ವಾಸಸ್ಥಳ | ಃ | ಊಗರಗೋಳ್ ಗ್ರಾಮ | ಚಾ.ಸಾ. ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ಈಗ ಸುಮಾರು *3-4* ವರ್ಷಗಳ ಹಿಂದೆ ನಿಪಿ-*5* ರಲ್ಲಿ ನಿಪಿ-*5* *(ಎ)* ನಂತೆ ಪೋಲಿಸರು *1*ನೇ ಆರೋಪಿಯ ಮನೆಯ ಬಳಿ ಬಂದಾಗ ನನ್ನ ಸಹಿಯನ್ನು ಪಡೆದಿದ್ದಾರೆ. ಆರೋಪಿ ನನ್ನ ಸಮಕ್ಷಮ ಯಾವುದೇ ಆಯುಧವನ್ನು ಪೋಲಿಸರ ವಶಕ್ಕೆ ನೀಡಿಲ್ಲ. ನಿಪಿ-*5* ರ ಅಂಶಗಳನ್ನು ನಾನು ತಿಳಿದುಕೊಂಡಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*1.* ದಿನಾಂಕ *16.11.2015* ರಂದು ತನಿಖಾಧಿಕಾರಿ ಮತ್ತು ಪೋಲಿಸರು *1*ನೇ ಆರೋಪಿಯ ಮನೆಯ ಬಳಿ ಬಂದು ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಪಿಸ್ತೂಲನ್ನು ಹಾಜರು ಮಾಡಿದ ಬಗ್ಗೆ ತನಿಖಾಧಿಕಾರಿ ನಿಪಿ-*5* ರಂತೆ ಅಮಾನತ್ತು ಮಹಜರ್ ಮೂಲಕ ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ಮು.ಮಾ *-01*

ಪಿಸ್ತೂಲನ್ನು ಆರೋಪಿ ಹಾಜರು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-5 ರ ಅಂಶಗಳನ್ನು ನಾನು ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಸಹಾಯ ಮಾಡಲು ಸುಳ್ಳು ಸಾಕ್ಷಿ ನೀಡಿದ್ದೇನೆ ಎಂದರೆ ಸರಿಯಲ್ಲ.

*ಪಾಟೀ ಸವಾಲು:* ಆರೋಪಿ ಪರ ವಕೀಲರಿಂದಃ ಇಲ್ಲ.

***ಮರು ವಿಚಾರಣೆ:-*** *ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*